ಪದಕೋಶದಲ್ಲಿ (ಯಾವುದೇ ವರ್ಗ, ಜಾತಿ, ಅಂತಸ್ತುಗಳ ಭೇದಭಾವವಿಲ್ಲದೇ, ಏಕತ್ರವಾಗಿ!) ಬಳಕೆಯಾಗುತ್ತಿದ್ದರೂ, 'ಮುಂಡೆ' ಹಾಗೂ 'ರಂಡೆ'ಯ ಪುಲ್ಲಿಂಗ ಮಾತ್ರ (ನನಗೆ ಗೊತ್ತಿರುವಂತೆ) ಇಲ್ಲ! ಅರಿಸಿನ, ಕುಂಕುಮ ಕೊಡುವ ಅಥವಾ ಬಿಡುವ ಮೂಲಕ ಹೆಂಗಸೊಬ್ಬಳಿಗೆ ಆಕೆಯ ವೈವಾಹಿಕ ಬದುಕಿನ ಸ್ಥಿತಿಯನ್ನು ಸೂಚಿಸುವ ಪದ್ಧತಿಗಳನ್ನೂ ಹೆಂಗಸಿನ ಮೂಲಕವೇ ಆಚರಿಸಿ, ಉಳಿಸಿಕೊಂಡು ಬರುವಂತೆ ಹೀಗೆ ಹೆಂಗಸರನ್ನು ಶತಮಾನಗಳಿಂದ ಬ್ರೈನ್‌ವಾಶ್ ಮಾಡಿದ (ನಮ್ಮ) ಪುರುಷರತ್ನಗಳ ಸಾಧನೆಯೇನು ಕಡಿಮೆಯೇ?

ಈ ಚರ್ಚೆ ಇರಲಿ, ನಾವೀಗ ಮುತ್ತೈದೆ(?) ಸೂಚಕವಾದ ಅರಿಸಿನ, ಕುಂಕುಮಕ್ಕೆ ವಾಪಸಾಗೋಣ.

ಹಾಗಂತ ನಾನು ಈ ಅರಿಸಿನ, ಕುಂಕುಮಕ್ಕೆ ಭಾರೀ ಸಂಪ್ರದಾಯಸ್ಥೆಯ ಹಾಗೆ ಆತುಕೊಂಡಿದ್ದೇನೆ ಎಂದೇನಿಲ್ಲ. ಇತ್ತೀಚೆಗಂತೂ ಮನೆಗೆ ಬಂದವರು ಹೊರಡುವಾಗ, ಅರಿಸಿನ, ಕುಂಕುಮ ಕೊಡುವುದು ಮರೆತೇ ಹೋಗುವುದು ಮಾತ್ರವಲ್ಲ, ಸೀರೆಗೀರೆ ಉಡುಗೊರೆ ಕೊಡುವಾಗ ಅಥವಾ ಯಾವತ್ತೋ ಅಪರೂಪಕ್ಕೆ ರಂಗೋಲಿ ಹಾಕುವಾಗ ಅರಿಸಿನ, ಕುಂಕುಮ ಎಲ್ಲಿಟ್ಟಿದ್ದೇನೆ ಎಂದು (ಸಾಯ್ಲಿ ಅತ್ಲಾಗೆ, ಎಷ್ಟು ಮರೆವು ಎಂದು ಬೈದುಕೊಂಡು!) ಹುಡುಕುವುದೇ ಆಗುತ್ತದೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಹಾಕಿಕೊಳ್ಳುತ್ತಿದ್ದ ತೆಳುವಾದ ಪುಟ್ಟ ಸರವನ್ನೂ ಯಾಕೋ ಒಂಥರಾ ಭಾರವೆಂದು, ಹಬ್ಬಹುಣ್ಣಿಮೆ, ಮದುವೆಗಿದುವೆಗಳಿಗೆ ಹೋಗುವಾಗ ಹಾಕಿಕೊಂಡರೆ ಸಾಕೆಂದು ತೆಗೆದಿಟ್ಟಿದ್ದಾಯಿತು (ಅಲ್ಲವೇ ಮತ್ತೆ, ದಿನಾ ಹಾಕಿಕೊಂಡು ಇರುವ ಒಂದೇ ಚಿನ್ನದ ಸರವನ್ನು ಸವೆಸುವುದುಂಟೇ?!). ಕಿವಿಗೆ ಹಾಕಿಕೊಳ್ಳುತ್ತಿದ್ದ ಪುಟಾಣಿ ಕಿವಿಯೋಲೆ ಕೂಡ ರಾತ್ರಿ ಒಂಥರಾ ಚುಚ್ಚಿದ ಹಾಗೆ ಎನ್ನಿಸಿ (ಯಾರಿಗೆ ಚುಚ್ಚುವುದು ಎಂದು ಕೇಳದಿರಿ, ಬೇರೆ ಯಾರಿಗಲ್ಲ ಮಾರಾಯರೇ... ನನಗೇ!!) ಅದನ್ನೂ ಸರದ ಜೊತೆ ಬೇಕಿದ್ದಾಗ ಹಾಕಿಕೊಂಡರೆ ಸಾಕೆನ್ನಿಸಿ ಒಳಗಿಟ್ಟಿದ್ದಾಯಿತು. ಅಲ್ಲದೇ ಟೆರ್ರಾಕೋಟಾ ಅಥವಾ ಇನ್ನಿತರ

